## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾರುಕಟ್ಟೆ ಸ್ಥಾಯಿ ಸಮಿತಿಯ ದಿನಾಂಕ: 28-01-2013 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | | ಹಾಜರಿದ್ದ ಅಧಿಕಾರಿಗಳು |
|---|---|---|
| ಮಾಲತಿ ಎನ್.ವೆಂಕಟಸ್ವಾಮಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| ಕೆ. ರಮೇಶ್‌ರಾಜು | ಸದಸ್ಯರು | ಕಾರ್ಯಪಾಲಕ ಅಭಿಯಂತರರು(ಮಾರುಕಟ್ಟೆ) |
| ಹೆಚ್.ಎಸ್.ಲಲಿತ | ಸದಸ್ಯರು | ಕಂದಾಯಾಧಿಕಾರಿ(ಮಾರುಕಟ್ಟೆ) |
| ಎ. ಕೋದಂಡರೆಡ್ಡಿ | ಸದಸ್ಯರು | ಸಹಾಯಕ ಕಂದಾಯಾಧಿಕಾರಿ(ಪೂರ್ವ-ಮಾರುಕಟ್ಟೆ) |
| ಹೆಚ್.ಎಸ್.ರಾಜೇಶ್ವರಿ | ಸದಸ್ಯರು | ಸಹಾಯಕ ಕಂದಾಯಾಧಿಕಾರಿ(ಪಶ್ಚಿಮ-ಮಾರುಕಟ್ಟೆ) |
| ಪಿ. ಸುಗುಮಾರ್ (ಸುಗುಣ್) | ಸದಸ್ಯರು | |
| ಜಿ.ಎ. ಅಶ್ವತ್ಥ್ ನಾರಾಯಣ | ಸದಸ್ಯರು | |
| ವಿ. ಪಳನಿಯಮ್ಮಾಳ್ | ಸದಸ್ಯರು | |
| ಟಿ. ಗೋಪಾಲಕೃಷ್ಣ | ಸದಸ್ಯರು | |
| ಶಕೀಲ್ ಅಹಮದ್ | ಸದಸ್ಯರು | |
| ಗೈರು ಹಾಜರಿದ್ದ ಸದಸ್ಯರು | | |
| ಕೆ. ಶಿವಕುಮಾರ್ | ಸದಸ್ಯರು | |

*(ಹಿಂದಿನ ಸಭೆಯ ನಡವಳಿಯನ್ನು ಓದಿ ದಾಖಲಿಸಿಕೊಳ್ಳಲಾಯಿತು)*

*ವಿಷಯದ ಸಂಖ್ಯೆ: ಮಾ.ಸ್ಥಾ.ಸ/ಪಿ.ಆರ್/2/2012-2013*

ಮಾನ್ಯ ಆಯುಕ್ತರವರ ದಿನಾಂಕ: 17-01-2013 ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀ. ಕೆ.ವಸಂತಕುಮಾರ್ ರವರು ತಮ್ಮ ತಾಯಿ ದಿವಂಗತ॥ಲಕ್ಷ್ಮೀ ರವರು ತಮ್ಮ ಜೀವಿತ ಕಾಲದಲ್ಲಿ ಎಸ್.ಜೆ.ಪಿ ರಸ್ತೆಯಲ್ಲಿ ಇದ್ದ ತಾತ್ಕಾಲಿಕ ಮಳಿಗೆ ಸಂಖ್ಯೆ:4ರಲ್ಲಿ ಹೂವಿನ ವ್ಯಾಪಾರ ನಡೆಸುತ್ತಿದ್ದು, ಸದರಿ ಮಳಿಗೆಯ ಬದಲಾಗಿ ನೂತನ ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆಯಲ್ಲಿ ಬದಲಿ ಮಳಿಗೆಯನ್ನು ನೀಡಿರುವುದಿಲ್ಲವೆಂದು ತಿಳಿಸುತ್ತಾ, ಈಗ ಸದರಿ ಮಾರುಕಟ್ಟೆಯ ನೆಲ ಮಹಡಿ ಮಳಿಗೆ ಸಂಖ್ಯೆ:20 ಅಥವಾ ಮಳಿಗೆ ಸಂಖ್ಯೆ:2 ಹಾಲಿ ಖಾಲಿ ಇದ್ದು, ಇವುಗಳಲ್ಲಿ ಒಂದನ್ನು ತಾಯಿಯವರು ಮೃತರಾಗಿರುವ ಕಾರಣ ಅವರ ಪರವಾಗಿ ಅವರ ಮಗನಾದ ಶ್ರೀ.ಕೆ.ವಸಂತಕುಮಾರ್ ರವರಿಗೆ ಹಂಚಿಕೆ ಮಾಡಲು ಕೋರಿರುತ್ತಾರೆ.

ಸದರಿ ವಿಷಯವು ಮಳಿಗೆ ವರ್ಗಾವಣೆಗೆ ಸಂಬಂಧಿಸಿದ್ದು, ಮೂಲ ಹಂಚಿಕೆದಾರರು ಮೃತರಾಗಿದ್ದು, ಯಾವುದೇ ಮಳಿಗೆ ಹಂಚಿಕೆಯಾಗದೇ ಇರುವ ಕಾರಣ ಸದರಿಯವರ ಕೋರಿಕೆಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

ಮುಂದುವರಿದಂತೆ, ಕೆ.ಎಂ.ಸಿ. ಕಾಯ್ದೆ 1976ರ ನಿಯಮಾವಳಿ 176ರ ಅಡಿಯಲ್ಲಿ ಪಾಲಿಕೆಯಲ್ಲಿ ಮಳಿಗೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇರ ಹಂಚಿಕೆ ಮಾಡಲು ಈ ಕೆಳಕಂಡಂತೆ ಅವಕಾಶವಿರುತ್ತದೆ.

7) ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರಿಗೆ 2 ವರ್ಷಗಳ ಅವಧಿ.
8) ಮಾರುಕಟ್ಟೆ ಸ್ಥಾಯಿ ಸಮಿತಿಗೆ 3 ವರ್ಷಗಳ ಅವಧಿ.
9) ಪಾಲಿಕೆ ಸಭೆಗೆ 5 ವರ್ಷಗಳ ಅವಧಿ.

5 ವರ್ಷಗಳ ಅವಧಿಗೆ ಮೀರಿ ಗುತ್ತಿಗೆ ಹಂಚಿಕೆ ನೀಡಬೇಕಾದಲ್ಲಿ ಪಾಲಿಕೆಯ ಸಭೆಯ ತೀರ್ಮಾನವನ್ನು ಮಾನ್ಯ ಸರ್ಕಾರದ ಅನುಮೋದನೆ ಪಡೆಯಬೇಕಾಗುತ್ತದೆ.

ಮೇಲ್ಕಂಡ ಅಂಶಗಳನ್ನು ಮಾರುಕಟ್ಟೆ ಸ್ಥಾಯಿ ಸಮಿತಿಯ ಅವಗಾಹನೆಗೆ ಸಲ್ಲಿಸುತ್ತಾ, ಮುಂದಿನ ಸೂಕ್ತ ಕ್ರಮದ ಬಗ್ಗೆ ನಿರ್ಣಯಕ್ಕಾಗಿ ಸ್ಥಾಯಿ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾಗಿರುವ ಆಯುಕ್ತರ ಟಿಪ್ಪಣಿ.

*ನಿರ್ಣಯ:- ಸಭೆಯಲ್ಲಿ ಚರ್ಚಿಸಿದಂತೆ ಮಾಹಿತಿಯನ್ನು ಒದಗಿಸಲು ಸೂಚಿಸಿ, ಮುಂದೂಡಲಾಗಿದೆ.*

Malathi N Venkataswamy
(ಮಾಲತಿ.ಎನ್.ವೆಂಕಟಸ್ವಾಮಿ)
ಅಧ್ಯಕ್ಷರು
ಮಾರುಕಟ್ಟೆ ಸ್ಥಾಯಿ ಸಮಿತಿ.

ಪ್ರತಿಯನ್ನು :-

1) ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಯುಕ್ತರವರ ಆಪ್ತಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
4) ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಕಳುಹಿಸಿದೆ.
5) ಅಪರ ಆಯುಕ್ತರು(ಮಾರುಕಟ್ಟೆ) ರವರಿಗೆ ಅಗತ್ಯ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
6) ಕೌನ್ಸಿಲ್ ಕಾಯದರ್ಶಿಯವರ ಅವಗಾಹನೆಗೆ ಕಳುಹಿಸಲಾಗಿದೆ.
7) ಉಪ ಆಯುಕ್ತರು (ಮಾರುಕಟ್ಟೆ) ರವರಿಗೆ ಸೂಕ್ತ ಕ್ರಮ ವಹಿಸಲು ಕೋರಿ ಕಳುಹಿಸಿದೆ.
8) ಮುಖ್ಯ ಅಭಿಯಂತರರು (ಮಾರುಕಟ್ಟೆ) ರವರಿಗೆ ಕಳುಹಿಸಿದೆ.
9) ಕಾರ್ಯಪಾಲಕ ಅಭಿಯಂತರರು(ಮಾರುಕಟ್ಟೆ) ರವರಿಗೆ ಕಳುಹಿಸಿದೆ.
10) ಕಂದಾಯ ಅಧಿಕಾರಿ (ಮಾರುಕಟ್ಟೆ) ರವರಿಗೆ ಸೂಕ್ತ ಕ್ರಮ ವಹಿಸಲು ಕೋರಿ ಕಳುಹಿಸಿದೆ.
11) ಸಹಾಯಕ ಕಂದಾಯ ಅಧಿಕಾರಿ (ಪೂರ್ವ/ಪಶ್ಚಿಮ/ದಕ್ಷಿಣ) ರವರಿಗೆ ಸೂಕ್ತ ಕ್ರಮ ವಹಿಸಲು ಕೋರಿ ಕಳುಹಿಸಿದೆ
12) ಮಾರುಕಟ್ಟೆ ಸ್ಥಾಯಿ ಸಮಿತಿಯ ಮಾನ್ಯ ಸದಸ್ಯರುಗಳಾದ ಶ್ರೀಯುತರು :

| | |
|---|---|
| ಕೆ.ರಮೇಶ್‌ರಾಜು (ವಾರ್ಡ್ ನಂ.184) | ಪಿ. ಸುಗುಮಾರ್(ಸುಗುಣ್)(ವಾರ್ಡ್ ನಂ.51), |
| ಹೆಚ್.ಎಸ್.ಲಲಿತ(ವಾರ್ಡ್ ನಂ.162), | ಜೆ.ಎ. ಅಶ್ವತ್ಥ್‌ನಾರಾಯಣ(ವಾರ್ಡ್ ನಂ.139), |
| ಎ. ಕೋದಂಡರೆಡ್ಡಿ(ವಾರ್ಡ್ ನಂ.27), | ವಿ. ಪಳನಿಯಮ್ಮಾಳ್(ವಾರ್ಡ್ ನಂ.60), |
| ಹೆಚ್.ಎಸ್. ರಾಜೇಶ್ವರಿ(ವಾರ್ಡ್ ನಂ. 131), | ಶಕೀಲ್ ಅಹಮ್ಮದ್ (ವಾರ್ಡ್‌ನಂ.91) |
| ಟಿ. ಗೋಪಾಲಕೃಷ್ಣ (ವಾರ್ಡ್ ನಂ.94) | ಕೆ. ಶಿವಕುಮಾರ್(ವಾರ್ಡ್ ನಂ.111), |

ರವರುಗಳ ಅವಗಾಹನೆಗೆ ಕಳುಹಿಸಲಾಗಿದೆ.